Annual Report of NSS- 2016-17.

# ರಾಷ್ಟ್ರೀಯ ಸೇವಾ ಯೋಜನಾ ಘಟಕ 1 ಮತ್ತು 2
# ರಾಷ್ಟ್ರೀಯ ಸೇವಾ ಯೋಜನೆ: 2016–17ನೇ ಸಾಲಿನ
# ನಿತ್ಯ ಚಟುವಟಿಕೆಗಳ ವರದಿ

- ದಿನಾಂಕ 06.06.2016ರಿಂದ 12.06.2016ರ ವರೆಗೆ ಮೈಸೂರಿನ ಅಂತರ ರಾಷ್ಟ್ರೀಯ ವಿದ್ಯಾರ್ಥಿನಿಲಯದಲ್ಲಿ ಇಟಿಐ ಸಂಸ್ಥೆ ನಡೆಸಿದ ರಾಷ್ಟ್ರೀಯ ಸೇವಾ ಯೋಜನಾ ಕಾರ್ಯಕ್ರಮಾಧಿಕಾರಿಗಳ ತರಬೇತಿ ಶಿಬಿರದಲ್ಲಿ ಭಾಗವಹಿಸಲಾಯಿತು.
- ದಿನಾಂಕ 22.06.2016ರಂದು ಕಾಲೇಜಿನ ರಜತ ಸಭಾಂಗಣದಲ್ಲಿ ಅಂತರ ರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಯಿತು.
- ದಿನಾಂಕ 02.07.2016ರಂದು ಕಾಲೇಜಿನ ನಿಸರ್ಗವನ ಪಕ್ಕದ ಪ್ರದೇಶದಲ್ಲಿ ಶಾಸಕರಾದ ಶ್ರೀ ಕಿಮ್ಮನೆ ರತ್ನಾಕರರವರಿಂದ ಗಿಡ ನೆಡುವ ಮೂಲಕ ವನ ಮಹೋತ್ಸವ ಆಚರಿಸಲಾಯಿತು.
- ದಿನಾಂಕ 08.07.2016ರ ಶುಕ್ರವಾರ ಶಿವಮೊಗ್ಗ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ತಾಲ್ಲೂಕು ಆಡಳಿತ ಸಹಯೋಗದಲ್ಲಿ ಯಡೇಹಳ್ಳಿ ಕೆರೆಯ ಬಳಿ 1500 ಗಿಡನೆಡುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಗಿಡ ನೆಡಲಾಯಿತು.
- ದಿನಾಂಕ 11.07.2016ರಿಂದ 17.07.2016ರಂದು ಸಹ್ಯಾದ್ರಿ ಕಾಲೇಜು ಶಿವಮೊಗ್ಗದಲ್ಲಿ ನಡೆದ ಅಂತರ ಕಾಲೇಜು ಮಟ್ಟದ ಎನ್‌ಎಸ್‌ಎಸ್ ಶಿಬಿರಕ್ಕೆ ಕಾಲೇಜಿನ 5 ಜನ ವಿದ್ಯಾರ್ಥಿಗಳನ್ನು ಕಳುಹಿಸಿಕೊಡಲಾಯಿತು.
- ದಿನಾಂಕ 17.07.2016ರಂದು ಪ್ರಿ–ಆರ್‌ಡಿ ಪೆರೇಡ್ ಆಯ್ಕೆಗೆ ಕಾಲೇಜಿನ ವಿದ್ಯಾರ್ಥಿಗಳನ್ನು ಕಳುಹಿಸಲಾಯಿತು.
- ದಿನಾಂಕ 21.07.2016 ರಂದು ಕಾಲೇಜಿನ ನಿರ್ಮಾಣ ಹಂತದಲ್ಲಿರುವ ಲೇಡಿಸ್ ಹಾಸ್ಟಲ್ ಪಕ್ಕದಲ್ಲಿರುವ ಗಿಡಗಳನ್ನು ಸವರಿ–ಪ್ಲಾಸ್ಟಿಕ್ ಆಯ್ದು ತೆಗೆಯಲಾಯಿತು.
- ದಿನಾಂಕ 29.07.2016ರುಂದು ಕಾಲೇಜಿನ ಕೆಎಸ್‌ಓಯು ಕೊಠಡಿಯಲ್ಲಿ ಎನ್‌ಎಸ್‌ಎಸ್ ಸಲಹಾ ಸಮಿತಿ ಸಭೆ ಕರೆಯಲಾಯಿತು.
- ದಿನಾಂಕ 09.08.2016 ರಂದು ರಜತ ಸಭಾಂಗಣದಲ್ಲಿ 2016–17ನೇ ಸಾಲಿನ ಎನ್‌ಎಸ್‌ಎಸ್ ಚಟುವಟಿಕೆಗಳ ಸಾಂಕೇತಿಕ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ವಿದ್ಯಾರ್ಥಿಗಳಿಗೆ ಎನ್‌ಎಸ್‌ಎಸ್ ಕುರಿತು ಪ್ರೇರಣಾದಾಯಕ ಮಾತುಗಳನ್ನು ಡಾ. ಮೋಹನ್ ಚಂದ್ರಗುತ್ತಿರವರು ಆಡಿದರು.
- ದಿನಾಂಕ 15.08.2016ರಂದು ಸ್ವಾತಂತ್ರ್ಯ ದಿನಾಚರಣೆ ಆಚರಣೆ ನಡೆಸಿ, ಪ್ರಯುಕ್ತ ಕಾಲೇಜಿನ ಫುಟ್‌ಪಾತ್ ಮೇಲೆ ಬೆಳೆದ ಹುಲ್ಲನ್ನು ಕಿತ್ತು ಸ್ವಚ್ಛಗೊಳಿಸಲಾಯಿತು.
- ದಿನಾಂಕ 20.08.2016 ರಂದು ಸದ್ಭಾವನಾ ದಿನದ ಪ್ರಯುಕ್ತ ವಿದ್ಯಾರ್ಥಿಗಳಿಗೆ ಸದ್ಭಾವನಾ ವಿಧಿಯನ್ನು ಬೋಧಿಸಿ ಭಾವೈಕ್ಯತಾ ಗೀತೆ ಹಾಡಲಾಯಿತು.
- ದಿನಾಂಕ 24.8.2016ರಂದು ತೀರ್ಥಹಳ್ಳಿ ಪಟ್ಟಣ ಪಂಚಾಯಿತಿ ಏರ್ಪಡಿಸಿದ ಪ್ಲಾಸ್ಟಿಕ್ ನಿರ್ಮೂಲನಾ ಆಂದೋಲನದಲ್ಲಿ ಸ್ವಯಂ ಸೇವಕರು ಬೀದಿ ನಾಟಕ ಪ್ರದರ್ಶಿಸಿದರು.



Scanned by CamScanner

- ದಿನಾಂಕ 03.09.2016 ರಂದು ರಾ.ಸೇ.ಯೋ ಕಛೇರಿ ಶಿವಮೊಗ್ಗದಲ್ಲಿ ಎನ್.ಎಸ್.ಎಸ್. ಅಧಿಕಾರಿಗಳ ಕಾರ್ಯಾಗಾರದಲ್ಲಿ ಭಾಗವಹಿಸಲಾಯಿತು.
- ದಿನಾಂಕ 17.09.2016 ರಂದು ಕಾಲೇಜಿನ ಮುಂಭಾಗದಲ್ಲಿರುವ ಹೊಂಗೆ ಗಿಡಗಳ ಬುಡ ಬಿಡಿಸಿ, ಕಾರ್ ಸ್ಟಾಂಡ್‌ನಲ್ಲಿ ಬೆಳೆದಿರುವ ಗಿಡಗಳನ್ನು ಕೀಳಲಾಯಿತು.
- 24.09.2016 ರಂದು ಎನ್.ಎಸ್.ಎಸ್ ದಿನದ ಆಚರಣೆಯನ್ನು ಕಾಲೇಜಿನ ಆವರಣದಲ್ಲಿ ಹಮ್ಮಿಕೊಳ್ಳಲಾಯಿತು.
- ದಿನಾಂಕ 2.10.2016 ರಂದು ಗಾಂಧೀಜಿಯವರ 148ನೇ ಜನ್ಮ ದಿನಾಚರಣೆ ಪ್ರಯುಕ್ತ ಕಾಲೇಜಿನ ಮುಂಭಾಗದ ರಸ್ತೆಯ ಎರಡೂ ಬದಿಯಲ್ಲಿ ಸ್ವಚ್ಛತಾ ಕಾರ್ಯ ಕೈಗೊಳ್ಳಲಾಯಿತು.
- ದಿನಾಂಕ 7.10.2016 ರಿಂದ 16.10.2016ರ ವರೆಗೆ ತಮಿಳುನಾಡಿನ ತಿರುಚನಾಪಳ್ಳಿಯಲ್ಲಿ ನಡೆದ ಪ್ರಿಆರ್‌ಡಿ ಕ್ಯಾಂಪ್ 2016 ಆಯ್ಕೆ ಪ್ರಕ್ರಿಯೆಗೆ ಕಾಲೇಜಿನ ದ್ವಿತೀಯ ಬಿಕಾಂ ವಿದ್ಯಾರ್ಥಿ ಆಶಿಕ್ ಬಿ.ವಿ ಇವರನ್ನು ಕಳುಹಿಸಿಕೊಡಲಾಯಿತು.
- ದಿನಾಂಕ 8.10.2016 ರಂದು ಎನ್‌ಸಿಸಿ ಸಹಯೋಗದಲ್ಲಿ ರಕ್ತಗುಂಪು ತಪಾಸಣೆ, ರಕ್ತದಾನ, ವನ್ಯಜೀವಿ ಛಾಯಾಚಿತ್ರ ಪ್ರದರ್ಶನವನ್ನು ಹಮ್ಮಿಕೊಳ್ಳಲಾಯಿತು.
- ದಿನಾಂಕ 13.12.2016 ರಂದು ಕಾಲೇಜಿನ ಗ್ರಂಥಾಲಯ ಪಕ್ಕದಲ್ಲಿ ಹಳು, ಕಸ ತೆಗೆದು ಲಾನ್ ನಿರ್ಮಿಸಲು ನೆಲ ಹದಗೊಳಿಸಲಾಯಿತು.
- ದಿನಾಂಕ 19.12.2016 ರಂದು ಶಿವಮೊಗ್ಗದ ರಾ.ಸೇ. ಯೋ ಕಛೇರಿಯಲ್ಲಿ ನಡೆದ ಸಭೆಗೆ ಕಾಲೇಜಿನ ಕಾರ್ಯಕ್ರಮಾಧಿಕಾರಿಗಳು ಭಾಗವಹಿಸಿದರು.
- ದಿನಾಂಕ 3.01.2017ರಂದು ಕುವೆಂಪು ವಿವಿ ಎನ್‌ಎಸ್‌ಎಸ್ ಘಟಕವು ಡಿವಿಎಸ್ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾದ 'ಡಿಜಿಟಲ್ ಇಂಡಿಯಾ' ಮತ್ತು ವ್ಯಕ್ತಿತ್ವ ವಿಕಸನ ಕಾರ್ಯಗಾರಕ್ಕೆ ವಿದ್ಯಾರ್ಥಿಗಳನ್ನು ಕಳುಹಿಸಿ ಕೊಡಲಾಯಿತು.
- ದಿನಾಂಕ 09.01.2017ರಂದು ರಾಮ್ ಕುಮಾರ್ ವರ್ಮ ಎನ್ನುವ ಕಿವುಡ, ಮೂಗ, ವ್ಯಕ್ತಿಗೆ ಧನ ಸಂಗ್ರಹಿಸಿ ನೀಡಲಾಯಿತು.
- ದಿನಾಂಕ 16.01.2017ರಂದು ಕೋಮನೆ ಗ್ರಾಮದ ಶಾಲೆಯಲ್ಲಿ ನಡೆದ ಗ್ರಾಮಸಭೆಗೆ ಹಾಜರಾಗಲಾಯಿತು.
- ದಿನಾಂಕ 19.01.2017 ರಂದು ಆರ್‌ಆರ್‌ಸಿ ವತಿಯಿಂದ ಶಿವಮೊಗ್ಗ ಎಟಿಎನ್‌ಸಿಸಿ ಕಾಲೇಜಿನಲ್ಲಿ ನಡೆದ ಪ್ರಬಂಧ, ಚರ್ಚಾ ಸ್ಪರ್ಧೆಗೆ ವಿದ್ಯಾರ್ಥಿಗಳನ್ನು ಕಳುಹಿಸಿಕೊಡಲಾಯಿತು.
- ದಿನಾಂಕ 14.01.2017 ರಿಂದ 27.01.2017ರ ವರೆಗೆ ನಡೆದ 2017ನೇ ಗಣರಾಜ್ಯೋತ್ಸವ ಪಥಸಂಚಲನ ಶಿಬಿರಕ್ಕೆ ಶ್ರೀ ಆಶಿಕ್ ಬಿ.ವಿ. ಇವರನ್ನು ಕಳುಹಿಸಿ ಕೊಡಲಾಯಿತು.
- ದಿನಾಂಕ 25.01.2017ರಂದು ಕಾಲೇಜಿನ ಆವರಣದ ಒಳಾಂಗಣ ಕ್ರೀಡಾಂಗಣದಲ್ಲಿ ಕ್ರೀಡಾ ಕೂಟದ ಪ್ರಯುಕ್ತ ಸ್ವಚ್ಛತಾ ಕಾರ್ಯ ಕೈಗೊಳ್ಳಲಾಯಿತು.
- ದಿನಾಂಕ 26.01.2017ರಂದು ಕಾಲೇಜಿನಲ್ಲಿ ಗಣ ರಾಜ್ಯೋತ್ಸವ ಆಚರಿಸಿ ಕೋಮನೆ ಗ್ರಾಮದಲ್ಲಿ ಸೇರಿದ ಎಸ್.ಡಿ.ಎಂಸಿ ಸದಸ್ಯರು ಮತ್ತು ಗ್ರಾಮಸ್ತರ ಸಭೆಯಲ್ಲಿ ಭಾಗವಹಿಸಲಾಯಿತು.
- ದಿನಾಂಕ 02.03.2017ರಂದು ಕಾಲೇಜಿನ ಕೆಎಸ್‌ಒಯು ಕೊಠಡಿಯಲ್ಲಿ ಎನ್‌ಎಸ್‌ಎಸ್ ಸಲಹಾ ಸಮಿತಿ ಸಭೆ ನಡೆಸಲಾಯಿತು.
- ದಿನಾಂಕ 28.03.2017ರಂದು ಶಿಬಿರಾನಂತರದ ಕುರಿತು ಸಮಾಲೋಚಿಸಲು ಕೋಮನೆ ಗ್ರಾಮಕ್ಕೆ ಭೇಟಿ ಕೊಡಲಾಯಿತು.

**ಡಾ. ಆರ್. ಕುಮಾರಸ್ವಾಮಿ, ಎನ್.ಟಿ. ಜಯಾನಂದ**
ಎನ್.ಎಸ್.ಎಸ್. ಅಧಿಕಾರಿಗಳು



Scanned by CamScanner